**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ**

**ಸಿ. ಸಿ. ನಂ.137/2025**

| | |
|---|---|
| **ಪಿರ್ಯಾಧಿದಾರರುಃ** | ಶ್ರೀಮತಿ ಅನಿತ ಕೋಂ ರೊನಾಲ್ಡ್ ಪೆರೆರಾ, ವಯಸ್ಸು ಸುಮಾರು 47 ವರ್ಷ, ಗೃಹಿಣಿ, ವ್ಯವಸಾಯ, ವಾಸ ಎನ್.ಕೆ. ರಸ್ತೆ, ಮರಿತೊಟ್ಲು ಗ್ರಾಮ, ಅಂದಗಾರು ಅಂಚೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

**-ವಿರುದ್ಧ -**

| | |
|---|---|
| **ಆರೋಪಿಃ** | ಶ್ರೀ ರಾಘವೇಂದ್ರ ಆರ್.ಎನ್. ಬಿನ್ ನಾಗರಾಜ ನಾಯ್ಕ, ಸುಮಾರು 42 ವರ್ಷ ವಯಸ್ಸು, ಕಂಪನಿಯಲ್ಲಿ ಕೆಲಸ, ವಾಸ ಮೇಲಿನ ರಾಗೋಡು, ತಲಮಕ್ಕಿ ಗ್ರಾಮ, ಅಂದಗಾರು ಅಂಚೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ. |

- - - - -

**ಆರೋಪಣೆ**

ಆರೋಪಿಯಾದ ನೀವು ಪಿರ್ಯಾದುದಾರರಿಂದ ರೂ. 1,50,000/- ಗಳನ್ನು ಕೈ ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲದ ಹಣದ ಬಾಬ್ತು ಅವರಿಗೆ ಚೆಕ್ ನಂ. **347119** ದಿನಾಂಕ 03.01.2025 ನ್ನು ನಮೂದಿಸಿದ ಫೆಡರಲ್ ಬ್ಯಾಂಕ್, ಬೆಂಗಳೂರು ಇಂದಿರಾನಗರ ಶಾಖೆಯ ಒಂದು ಚೆಕ್ಕನ್ನು ನೀಡಿದ್ದು, ಪಿರ್ಯಾದಿದಾರರು ಸದರಿ ಚೆಕ್ ಅನ್ನು ಕೆನರಾ ಬ್ಯಾಂಕ್, ಕೊಪ್ಪ ಕಡೂರು ಶಾಖೆಗೆ ಹಾಜರುಪಸಿದಾಗ **"Payment stopped by drawer**" ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 17.01.2025 ರಂತೆ ವಕೀಲರ ಮುಖಾಂತರ ನೋಟೀಸು ನೀಡಿದ್ದು, ಸದರಿ ನೋಟಿಸು ದಿನಾಂಕ 21.01.2025 ರಂದು ಜಾರಿಯಾಗಿದಾಗ್ಯೂ ಸಹ ನೀವು ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?

ಉತ್ತರಃ ತಿಳಿಯಿತು

ಪ್ರಶ್ನೆ 2ಃ- ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ದಿನಾಂಕ 06.02.2026

ಸಹಿ/- 06.03.2026
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಕೊಪ್ಪ